ಶ್ರೀ ಸೈಯದ್ ಜುಲ್ಫೀಕರ್ ಹುಷ್ಮಿ : ಏನಾದರೂ ಪಬ್ಲಿಕ್ ಪ್ರಾಪರ್ಟಿಗೆ ಡ್ಯಾಮೇಜ್ ಆದಾಗ, ನಾವು ದೂರು ಕೊಟ್ಟರೆ, ಸರ್ಕಾರದಲ್ಲಿ ವಿನಂತಿ ಮಾಡಿದರೆ, ನಮ್ಮ ಮೇಲೆಯೇ ಕೇಸ್ ಬುಕ್ ಮಾಡುತ್ತಾರೆ. ಈ ರೀತಿಯಾದರೆ ನಮ್ಮ ಕ್ಷೇತ್ರದಲ್ಲಿ ನಾವು ಹೇಗೆ ಕೆಲಸ ಮಾಡಬೇಕು? ಮುಸ್ಲೀಂ ಸಮಾಜದ್ದು ಒಂದೇ ಒಂದು ವಕ್ಫ್ ಪ್ರಾಪರ್ಟಿ ಅದನ್ನೂ ನಮಗೆ ಈ ಸರ್ಕಾರದವರು ಬಿಡುತ್ತಿಲ್ಲವೆಂದರೆ ನಾವೇನು ಮಾಡಬೇಕು? ಇದು ಸರ್ಕಾರದಿಂದ ಆಗುತ್ತಾ ಇದೆ, ಬೇರೆಯವರಿಂದ ಇದು ಆಗುತ್ತಾ ಇಲ್ಲ.

ಅಧ್ಯಕ್ಷರು : ಆಯಿತು. ಅದೇನೂ ತೊಂದರೆಯಾಗದಂತೆ ನೋಡಿಕೊಳ್ಳುತ್ತಾರೆ.

ಶ್ರೀ ಬಿ. ಬಿ. ಶಿವಪ್ಪ : ದಶಲಕ್ಷಬಾವಿ ಯೋಜನೆ ಬಗ್ಗೆ ಆಗಿರತಕ್ಕ ಅವ್ಯವಹಾರದ ಬಗ್ಗೆ ಪ್ರಸ್ತಾಪ ಮಾಡಿದ್ದೆವು ....

ಅಧ್ಯಕ್ಷರು : ಇದು ಆಗಲಿ. ಆಮೇಲೆ ನೀವು ಮಾತನಾಡಿ. ಸರ್ಕಾರದ ಪರವಾಗಿ ಅವರು 3-4 ವಿಚಾರಗಳಲ್ಲಿ ಸ್ಟೇಟ್‌ಮೆಂಟ್ ಮಾಡಬೇಕಾಗಿದೆ. ಇದನ್ನು ಮುಗಿಸಿ, ಮುಖ್ಯಮಂತ್ರಿಗಳ ಉತ್ತರ ಆದಮೇಲೆ ಕೊನೆಯಲ್ಲಿ ಸ್ಟೇಟಮೆಂಟು ಮಾಡಿಸೋಣ.

ಶ್ರೀ ಬಿ. ಬಿ. ಶಿವಪ್ಪ : ಹಾಸನದಲ್ಲಿ ದಶಲಕ್ಷಬಾವಿ ಯೋಜನೆ ವಿಚಾರದಲ್ಲಿ ಸಾಕಷ್ಟು ಅವ್ಯವಹಾರ ನಡೆದಿದೆ ಎಂಬುದನ್ನು ತಮ್ಮ ಗಮನಕ್ಕೆ ತಂದಿರುತ್ತೇವೆ.

(ಓ) ಹಾಸನದಲ್ಲಿ ಜಲಾನಯನ ಅಭಿವೃದ್ಧಿ ಯೋಜನೆ ಕುರಿತು.

ಶ್ರೀ ಬಿ. ಶಿವರಾಮ್ (ಗಂಡಸಿ) : ಅಧ್ಯಕ್ಷರೆ, 1993-94, 1994-95 ಮತ್ತು 1995-96ರಲ್ಲಿ ಇ.ಎ.ಎಸ್. ಹಣ ಮತ್ತೆ ಜಲಾನಯನ ಅಭಿವೃದ್ಧಿ ಯೋಜನೆ ಹಣ, ದಶಲಕ್ಷಬಾವಿ ಯೋಜನೆ, ಈ ಸ್ಕೀಮಗಳಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕೋಟಿಗಟ್ಟಲೆ ಹಣವನ್ನು ಕೊಟ್ಟಿದ್ದಾರೆ. ಮಂತ್ರಿಗಳು ಹಾಸನ ಜಿಲ್ಲೆಗೆ ಬಂದಾಗ ಅರಕಲಗೂಡು, ಬೇಲೂರು, ಸಕಲೇಶಪುರ ಮತ್ತು ಹಾಸನ ಬಗ್ಗೆ ವಿಚಾರಣೆ ಮಾಡಿ ಕೆಲವು ಕ್ರಮ ತೆಗೆದುಕೊಂಡಿದ್ದೇವೆಂದು ಹೇಳಿದರು. ವಾಸ್ತವಿಕವಾಗಿ ನಾನು ಅದನ್ನು ಚರ್ಚೆ ಮಾಡಬೇಕೆಂದು ತಮ್ಮ ಅನುಮತಿ ಪಡೆದಿದ್ದೆ. ಆದರೆ ಸಚಿವರು ಇಲ್ಲದೇ ಇದ್ದಾಗ ಅದನ್ನು ಮಾತನಾಡುವುದು ಬೇಡ ಎಂದು ಸಹಕಾರ ಇಲಾಖೆಯ ಬಗ್ಗೆ ಕೇಳಿದೆ. ಈಗ ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ. ಅವರಿಗೆ ದುರುಪಯೋಗವಾಗಿದೆ ಎಂಬುದು ಗೊತ್ತಾಗಿದೆ. ಸಾಕಷ್ಟು ಕಾಮಗಾರಿಗಳೇ ಆಗಿಲ್ಲ. ಇರತಕ್ಕಂತಹ ಕಾಮಗಾರಿಗಳಲ್ಲಿ ಗುಣಮಟ್ಟ ಇಲ್ಲ. ಸಮರ್ಪಕವಾಗಿ ಅನುಷ್ಠಾನಕ್ಕೆ ಬಂದಿಲ್ಲ. ಈಗ ಕೆಲವರು ಉಪಕರಣಗಳನ್ನು ತೆಗೆದುಕೊಂಡು ಹೋಗಿ ಕೆಲಸ ಮಾಡುತ್ತಿದ್ದಾರೆ. ಇದು 1993-94ನೇ ಇಸವಿಯಲ್ಲಿ ಆ ಜಿಲ್ಲೆಯಲ್ಲಿ ನಡೆದಿರತಕ್ಕಂಥ ದುರಂತ. ನಿಮ್ಮ ಕಾಲದಲ್ಲಿ ಏನು ಮಾಡಿದ್ದೀರಿ ಎನ್ನುವ ಪ್ರಶ್ನೆ ಅಲ್ಲ, ಏಕೆಂದರೆ ಅದು ಗಮನಕ್ಕೆ ಬಂದಿದ್ದು ಈಗ. ಅವರು ಕೆಲವು ಅಧಿಕಾರಿಗಳನ್ನು ಕಳಿಸಿ ವಿಚಾರಣೆ ಮಾಡುವುದಕ್ಕೆ ಶುರು ಮಾಡಿದ ಮೇಲೆ ಎಷ್ಟು ಕೆಲಸವಾಗಿದೆ ಎನ್ನತಕ್ಕಂಥ ವಿಚಾರ. ಅದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ. ಈಗಾಗಲೇ ಕೆಲಸ, ಮಾಡುತ್ತಿರುವ ಬಗ್ಗೆ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರೋ, ಎಷ್ಟು ಹಣ ದುರುಪಯೋಗವಾಗಿದೆ, ಏನಾಗಿದೆ ಎಂಬುದನ್ನು ಸಚಿವರಲ್ಲಿ ಕೇಳಬೇಕೆಂದೇ ತಮ್ಮ ಅನುಮತಿಯನ್ನು ಪಡೆದಿದ್ದು ಅದು ಏನಾಯಿತೆಂದರೆ ಅವರು ಇರಲಿಲ್ಲ,

ಅವರಿಲ್ಲದೆ ಬೇರೆಯವರನ್ನು ಕೇಳಿದರೆ ಉಪಯೋಗ ಆಗುವುದಿಲ್ಲವೆಂದು ನಾನು ಸಹಕಾರ ಇಲಾಖೆಯ ಮೇಲೆ ಪ್ರಶ್ನೆ ಕೇಳಿದೆ. ದಯವಿಟ್ಟು ಇದಕ್ಕೆ ಉತ್ತರ ಕೊಡಬೇಕೆಂದು ತಮ್ಮಲ್ಲಿ ನಿರೀಕ್ಷೆ ಮಾಡುತ್ತೇನೆ. ಅವರೂ ಕೂಡ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದಾರೆ.

Mr. SPEAKER : You get hold of all the details.

ಶ್ರೀ ಸಿ. ಬೈರೇಗೌಡ : ಇವತ್ತಿನ ದಿವಸವೇ ನಾನು ವಿವರವಾದ ಹೇಳಿಕೆಯನ್ನು ಮಾಡುತ್ತೇನೆ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ : ಅವರು ಹೇಳಿಕೆ ಕೊಡುತ್ತಾರೆ, ಆ ಸಂದರ್ಭದಲ್ಲಿ ನನ್ನ ವಿಷಯಕ್ಕೂ ಸೇರಿಸಿ ಹೇಳಿಕೆ ಕೊಡಲಿ ಎಂದು ಕೇಳುತ್ತೇನೆ. ನಾನು ಹಿಂದೆ ಒಂದು ಸಾರಿ ಪ್ರಸ್ತಾಪ ಮಾಡಿದ್ದೆ. ಸಾಯಿಲ್ ಕನ್‌ಸರ್ವೇಷನ್‌ನಲ್ಲಿ 500 ಕೋಟಿ ರೂಪಾಯಿ ದುರುಪಯೋಗವಾಗಿದೆ, ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಂಡಿದ್ದೇವಂದು ಹಲವಾರು ಪತ್ರಿಕೆಗಳಲ್ಲಿ ಬಂದಿದೆ. ಅದರ ಬಗ್ಗೆ ಏನಾಗಿದೆ, ಯಾರ ಮೇಲೆ ಕ್ರಮ ತೆಗೆದುಕೊಂಡಿದ್ದಾರೆ? ಎಷ್ಟು ದುರುಪಯೋಗವಾಗಿದೆ ಎಂಬುದನ್ನು ದಯವಿಟ್ಟು ಹೇಳಬೇಕು.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ಅನೇಕ ಕಡೆ ಹಣ ದುರುಪಯೋಗವಾಗಿದೆ. ನಾನು ಅದನ್ನು ಇಲ್ಲಾ ಎಂದು ಹೇಳುವುದಿಲ್ಲ. ಎಲ್ಲೆಲ್ಲಿ ಸರ್ಕಾರದ ಗಮನಕ್ಕೆ ಬಂದಿದೆ, ಅಲ್ಲೆಲ್ಲಾ ಬಹಳ ತೀವ್ರವಾದಂತಹ ಕ್ರಮ ತೆಗದುಕೊಂಡಿದ್ದೇವೆ. ಅನೇಕರ ಮೇಲೆ ಕ್ರಿಮಿನಲ್ ದೂರನ್ನು ಪೊಲೀಸ್ ಸ್ಟೇಷನ್‌ಗೆ ಕೊಟ್ಟು ಅರೆಸ್ಟ್ ಆಗಿರತಕ್ಕಂಥದ್ದು ಕೂಡ ನಡೆದಿದೆ. ನಾವು ಹಣ ದುರುಪಯೋಗ ಮಾಡಿರತಕ್ಕಂಥ ಯಾರನ್ನೂ ಕೂಡ ರಕ್ಷಣೆ ಮಾಡತಕ್ಕಂಥದ್ದು ಇಲ್ಲ. ಅವರು ಯಾವುದೇ ರೀತಿಯಾದಂಥ ಪ್ರಭಾವ ತಂದರೂ ಸಹ, ಒತ್ತಡ ತಂದರೂ ಸಹ ಅವರ ಮೇಲೆ ಅತ್ಯಂತ ಕಠಿಣವಾದ ಕ್ರಮ ತೆಗೆದುಕೊಳ್ಳತಕ್ಕಂಥದ್ದು ಶತಃಸಿದ್ಧ. ಸಭ್ಯಕ್ಕೆ ಇಷ್ಟನ್ನು ಹೇಳುತ್ತೇನೆ. ಎಲ್ಲೆಲ್ಲಿ ಎಷ್ಟೆಷ್ಟು ದುರುಪಯೋಗವಾಗಿದೆ ಎನ್ನತಕ್ಕಂಥ ವಿವರಗಳನ್ನು ಕೇಳಿದ್ದಾರೆ, ಆ ವಿವರಗಳನ್ನು ಇವತ್ತಿನ ದಿವಸವೇ ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಅದಕ್ಕೆ ತಮ್ಮ ಅಪ್ಪಣೆ ಬೇಕು ಎಂದು ತಮ್ಮಲ್ಲಿ ವಿನಂತಿಸುತ್ತೇನೆ.

ಶ್ರೀ ಸುಭಾಶ್ ಜೋಶಿ : ಸಕ್ಕರೆ ಮಂತ್ರಿಗಳು ಒಂದು ಹೇಳಿಕೆ ಕೊಡಬೇಕು. ಗಮನ ಸೆಳೆಯುವ ಸೂಚನೆ ಮೇಲೆ ಸಕ್ಕರೆ ಮಂತ್ರಿಗಳಿಂದ ನನಗೆ ಮಾಹಿತಿ ಬರಬೇಕಾಗಿದೆ. ಅದನ್ನು ಅವರು ಕೊಡಲಿಲ್ಲ.

ಅಧ್ಯಕ್ಷರು : ಮುಖ್ಯಮಂತ್ರಿಗಳ ಉತ್ತರವಾದ ಮೇಲೆ ಅವರಿಗೆ ಉತ್ತರ ಕೊಡಿ.

(ಓ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗದ ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿ

+ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಸನ್ಮಾನ್ಯ ಅಧ್ಯಕ್ಷರೆ, ನಾನು ಹೋದ ಅಧಿವೇಶನದಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗದ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಮತ್ತು ಬಡ್ತಿಯಲ್ಲಿ ಮೀಸಲಾತಿ ಕಾದಿರಿಸುವ ಬಗ್ಗೆ ಕೇಳಿದ್ದೆ, ರಿಸರ್ವೇಷನ್ ಪ್ರಕಾರ ಯಾವ ಯಾವ ಇಲಾಖೆಯಲ್ಲಿ ಈ ಬಡ್ತಿ ಕೊಡತಕ್ಕಂಥದ್ದು ಇದೆ. ಈಗಿರತಕ್ಕಂಥ ಕಾನೂನುಗಳಲ್ಲಿ ಏನಾದರೂ ಲಿಡ್ಡಿ ಬಂದರೆ, ಅದನ್ನು